❖ ಪ್ರಶಾಂತ ಭಟ್ ಹೆಗ್ಗಾರ್

## ತುಲಾ




ವೃತ್ತಿಯಿಂದಾಗದ್ದು ಪ್ರವೃತ್ತಿಯಿಂದಾಗಲಿದೆ. ಆಪತ್ತಿಗಾದೀತೆಂದು ಭಾವಿಸಿದ್ದು ನಿಮ್ಮ ಸಹಾಯಕ್ಕೆ ಬರದೇ ಹೋಗಬಹುದು. ಅಹಂಕಾರ ಕಳೆದಾಗ ಉಂಟಾಗುವ ಮನೋವ್ಯಥೆ ಮತ್ತು ಮನಃಶಾಂತಿಯನ್ನು ಅನುಭವಿಸುವಿರಿ.

ಶುಭ: 7, 13, 21

ಅಶುಭ: 6, 14, 19

## ಮಕರ




ನೀವು ಮುನ್ನಡೆದ ರಭಸಕ್ಕೆ ಕುಟುಂಬದವರೇ ಚಕಿತಗೊಳ್ಳುವರು. ಧೈರ್ಯದಿಂದ ಮುನ್ನಡೆಯುವಾಗ ಮತ್ತೆ ಮತ್ತೆ ಪರೀಕ್ಷೆಗಳೇ ಎದುರಾದಾವು. ತಾಳ್ಮೆಯಿರಲಿ. ಅಂಗಲಾಚದೇ ಆತ್ಮಾಭಿಮಾನದಿಂದ ಮುಂದೆ ಸಾಗಿ.

ಶುಭ: 1, 11, 20

ಅಶುಭ: 8, 6, 13, 22

## ವೃಶ್ಚಿಕ



ಸದಾ ಆಯುಧಗಳನ್ನು ಹರಿತಗೊಳಿಸಿಕೊಂಡೇ ಓಡಾಡುವ ಸ್ಥಿತಿ ನಿಮ್ಮದು. ಜಗತ್ತು ಎಷ್ಟು ವಿಶಾಲವಾಗಿದೆ ಎನಿಸಿದರೂ ಅಷ್ಟೇ ಸಂಕುಚಿತವಾಗಿದೆ ಎಂಬುದು ನಿಮ್ಮ ಗಮನಕ್ಕೆ ಬರಲಿದೆ. ದೇವತಾರಾಧನೆಯಿಂದ ಶುಭ ಫಲವಿದೆ.

ಶುಭ: 8, 16, 24

ಅಶುಭ: 6, 17, 21

## ಕುಂಭ




ನಿಮ್ಮ ಋಣಾತ್ಮಕ ವಿಚಾರಗಳೇ ನಿಮಗೆ ಬಾಧಕವಾಗಲಿವೆ. ಅನೇಕ ಕೆಲಸ ಕಾರ್ಯಗಳು ಮುಂದಿರುವಾಗ ಹೊಣೆಯನ್ನು ಅರಿತು ಮುನ್ನಡೆಯಿರಿ. ಧನಾತ್ಮಕ ಚಿಂತನೆ ನಿಮ್ಮದಾಗಲಿ. ದುಡಿತಕ್ಕೆ ತಕ್ಕ ಪ್ರತಿಫಲ ಇದ್ದೇ ಇದೆ.

ಶುಭ: 10, 21, 28

ಅಶುಭ: 8, 3, 21

## ಧನು




ಆಪತ್ತಿಗಾದವನೇ ಮಿತ್ರ ಎಂಬ ಮಾತಿಗೆ ಆಗಾಗ ಉದಾಹರಣೆಯೂ ಸಿಗುತ್ತಿದೆ. ಬೇಸರವಾದ ಕಷ್ಟವೊಂದನ್ನು ಈಗಷ್ಟೇ ಅನುಭವಿಸಿ ಎದ್ದ ನಿಮಗೆ ಜೀವನದ ರಹದಾರಿ ಅದೆಷ್ಟು ಕಷ್ಟ ಎಂಬುದು ಅರ್ಥವಾಗುತ್ತಿದೆ.

ಶುಭ: 9, 18, 27

ಅಶುಭ: 3, 13, 21

## ಮೀನ



ಸಾಹಸದಿಂದ ಕೈಗೊಂಡ ಕೆಲಸಗಳು ನಿರಸವಾಗಿ ಕೊನೆಗೊಳ್ಳಲಿವೆ. ವ್ಯಾವಹಾರಿಕ ವಿಷಯದಲ್ಲಿ ನಿಮ್ಮ ಎಂದಿನ ನಡವಳಿಕೆಯನ್ನು ತುಸು ಬದಲಾಯಿಸಿಕೊಂಡು ಮುನ್ನಡೆಯಿರಿ. ಶುಭ ಸಮಯ ಪ್ರಾಪ್ತವಾಗಲಿದೆ.

ಶುಭ: 12, 22, 3, 6

ಅಶುಭ: 8, 13, 21